ದಿನಾಂಕಃ 15-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ–** 1, 2 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ವಿ ಕೆ ಕೆ ವಕೀಲರಿಂದ

ಮೆಳ್ಳಾಗಟ್ಟಿ ಗ್ರಾಮದಲ್ಲಿ ಪ್ರತಿವಾದಿಯರ ಮನೆ ಇದೆ ಹಾಗೂ ಅದು ಈಗ ಬಿದ್ದಿದೆ. ಸದರಿ ಮನೆ ದಾಖಲೆ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ವಾಸುದೇವಗೌಡ ಮೊದಲು ಮೆಳ್ಳಾಗಟ್ಟಿ ಗ್ರಾಮದಲ್ಲಿ ಇದ್ದರು ಆದರೆ ಆನಂತರ ಅವರು ಅಳಿಯತನಕ್ಕೆ ಹಿರೇಬೂದಿಹಾಳ ಗ್ರಾಮಕ್ಕೆ ಹೋಗಿದ್ದರು. ಸುಮಾರು 25 ವರ್ಷದ ಹಿಂದೆ ವಾಸುದೇವಗೌಡರ ಮದುವೆ ಆಗಿದ್ದು ಆಗ ಅವರು ಅಳಿಯತನಕ್ಕೆ ಹಿರೇಬೂದಿಹಾಳ ಗ್ರಾಮಕ್ಕೆ ಹೋದರು. ವಾಸುದೇವಗೌಡ ಹಿರೇಬೂದಿಹಾಳ ಗ್ರಾಮಕ್ಕೆ ಹೋಗಿದ್ದರು ಮೆಳ್ಳಾಗಟ್ಟಿ ಗ್ರಾಮಕ್ಕೆ ಬಂದು ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಲಾವಣಿ ಕೊಟ್ಟಿದ್ದರು ಎಂದು ನುಡಿದಿದ್ದಾರೆ. ವಾಸುದೇವಗೌಡ ದಾವಾ ಜಮೀನನ್ನು ಲಾವಣಿ ಕೊಟ್ಟ ಬಗ್ಗೆ ನನ್ನ ಹತ್ತಿರ ದಾಖಲೆ ಇಲ್ಲ. ವಾಸುದೇವಗೌಡ ಯಾರ್ಯಾರಿಗೆ ಎಷ್ಟು ಹಣಕ್ಕೆ ದಾವಾ ಜಮೀನು ಲಾವಣಿ ಕೊಟ್ಟಿದ್ದರು ಎಂದು ನನಗೆ ಮಾಹಿತಿ ಇಲ್ಲ.

ವಾಸುದೇವಗೌಡ ಮತ್ತು 5 ನೇ ಪ್ರತಿವಾದಿ ಸಹೋದರರು. ವಾಸುದೇವಗೌಡ ಮತ್ತು 5 ನೇ ಪ್ರತಿವಾದಿಗೆ ಮೆಳ್ಳಾಗಟ್ಟಿ ಗ್ರಾಮದಲ್ಲಿ ಬೇರೆ ಜಮೀನು ಇವೆ ಎಂದರೆ ಸರಿ. ಆ ಜಮೀನನ್ನು ವಾಸುದೇವಗೌಡ ಹಾಗೂ 5 ನೇ ಪ್ರತಿವಾದಿಯ

ಕುಟುಂಬದವರು ಸಾಗುವಳಿ ಮಾಡುತ್ತಾರೆ ಎಂದರೆ ಸರಿ.  ದ್ಯಾಮನಗೌಡನ ಖಾಸ ತಮ್ಮನಾದ ಶಿವನಗೌಡ ಮೃತಪಟ್ಟಿದ್ದು ಆತನ ಮಕ್ಕಳು ಮೆಳ್ಳಾಗಟ್ಟಿ ಗ್ರಾಮದಲ್ಲಿ ಇದ್ದಾರೆ. ಅವರಿಗೆ ಮೆಳ್ಳಾಗಟ್ಟಿ ಗ್ರಾಮದಲ್ಲಿ ಮನೆ ಮತ್ತು ಜಮೀನು ಇವೆ ಎಂದರೆ ಸರಿ.

ಈ ಹಂತದಲ್ಲಿ 1, 2 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ವಿ ಕೆ ಕೆ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)